
ಕರೆದೊಯ್ದಳು. ಮರುದಿನ ಹೊರಡಿಸಯತ್ನಿಸಿದ ಕೇಶವನಿಗೆ ಎಷ್ಟು ಪ್ರಯತ್ನಿಸಿದರೂ ಕೇಳದೆ, 'ಅಣ್ಣ ನಿಮ್ಮನೀಲೆ ಇಷ್ಟು ವರ್ಷ ಇದ್ದಲೋ. ತಂಗೀರ ಮನೀಗೆ ಅಂವ ಎಲ್ ಹೋಗಾನೆ? ನಮಗೂ ಆಸಿಯಾಗೂದಿಲ್ವ ಅಂವ ಇರ್ಲಿ ಅಂತ. ನಿಂಗ್ ಅರ್ಜೆಂಟಿದ್ರೆ ಹೋಗು. ಅಂವ ನಾಕು ದಿನ ಬಿಟ್ ಬರ್ತ. ನಾವೇ ವ್ಯವಸ್ಥೆ ಮಾಡ್ತ್ರು, ಚಿಂತೆ ಬ್ಯಾಡ' ಅಂತ ಹಟಕ್ಕೆ ಬಿದ್ದಳು. ಕೇಶವನಿಗೆ ನಿಜಕ್ಕೂ ಬೆಂಗಳೂರಲ್ಲಿ ಕೆಲಸವಿತ್ತು. ಮನಸಿಲ್ಲದಿದ್ದರೂ ಸಂಜೆ ಗಾಡಿಗೆ ಹತ್ತಿದ. ಶ್ಯಾಮಲಳ ಮನೆಗೆ ಮರುದಿನ ಸುಶೀಲ, ಕಾಂತಿ ಬಂದಿಳಿದರು. ಶ್ಯಾಮಲಳ ಗಂಡ ಹೈವೆಯಲ್ಲಿ ಬಾಡಿಗೆಗೆ ಕಾರು ಓಡಿಸುತ್ತಿದ್ದ. ಅವರಿಗೆ ಎರಡು ಹೆಣ್ಣುಮಕ್ಕಳು, ಒಬ್ಬ ಮಗ. ಸುಶೀಲಳಿಗೆ ಮೂವರು ಗಂಡುಮಕ್ಕಳು. ಅವಳ ಸಂಸಾರಕ್ಕೆ ಧಾರೇಶ್ವರದ ಹತ್ತಿರ ಸಣ್ಣ ತೆಂಗಿನ ತೋಟವಿತ್ತು. ಮೂರನೆಯವಳ ಗಂಡ ಕುಮಟಾದಲ್ಲಿ ವರ್ತಕರ ಸಹಕಾರಿ ಬ್ಯಾಂಕಿನಲ್ಲಿ ಕ್ಲರ್ಕ್. ಅವರಿಗೆ ಆಸ್ತಿಯಿಲ್ಲ. ಏನೇನೋ ಸುದ್ದಿಗಳ ವಿನಿಮಯವಾಯಿತು. ಮರುದಿನ ಎಲ್ಲರೂ ಈಶ್ವರನನ್ನು ದೇವಸ್ಥಾನಕ್ಕೆ ಕರೆದೊಯ್ದರು. ಸಮುದ್ರ ದಂಡೆಯಲ್ಲಿ ಎಷ್ಟು ಜನಸಂದಣಿ ಅಂತ ಅಚ್ಚರಿಪಟ್ಟ. ಮೂವತ್ತೂರು ವರ್ಷ ಅವನಿಗೆ ಒಂದುದಿನ ಕಳೆದಂತಾಗಿದೆ ಅಂತ ತಮಾಷೆ ಮಾಡಿದರು. ಮೂರುಮೂರು ದಿನ ಒಬ್ಬೊಬ್ಬರ ಮನೆ, ದಿನವೂ ಪೈಪೋಟಿಮೇಲೆ ಅಡುಗೆ. ಸುಶೀಲಳ ಹೆಸರಲ್ಲಿ ಅವನಿಗೊಂದು ಮೊಬೈಲು ಕೊಡಿಸಿ ಬಳಸುವುದನ್ನು ಕಲಿಸಿದರು. ಆವತ್ತು ಸುದ್ದಿಯ ನಡುವೆ, 'ಅಣ್ಣ, ಅತ್ತಿಗೆ ಒಬ್ಬೆ ಇಷ್ಟು ವರ್ಷ ಕಾಲಹಾಕೂದು ಕಷ್ಟ ಇತ್ತು, ಹೌದು. ಆದ್ರೆ ಕೇಶವಣ್ಣ ಎರಡ್ವಾರಕ್ಕೇ ಈ ಪ್ರಸ್ತಾಪ ತೆಗೆದ. ನೀ ಇನ್ನು ಸರಿಯಾಗೂದೆ ಇಲ್ಲ ಅಂತ ಅವಗೆ ಹ್ಯಾಂಗೆ ಗೊತ್ತಿತ್ತು? ಬಹಳ ದುರಾಸೆ ಅವಗೆ. ಇನ್ನು ನೀ ಸ್ವಲ್ಪ ಹುಶಾರಾಗಿರಬೇಕು' ಶ್ಯಾಮಲ ಅಂದಳು.

'ಇಷ್ಟೆಲ್ಲ ವರ್ಷ ನನ್ ನೋಡ್ಕಂಡ್‌ನಲ ಬಿಡು, ಅಲ್ಲ ನಿಮಗೂ ವರ್ಷ ವರ್ಷ ಕೊಡತಿದ್ದೆ ಅಂದ...'

'ಹಾಂಗಂದ್ನ... ಏನಂತೆ ನಮಗೆ ಕೊಟ್ಟದ್ದು? ಹೇಳ್‌ಲಿ ಎದರು ಕೂತು. ಸ್ವಲ್ಪ ಉತ್ಪನ್ನವ ನಿನ್ನ ತೋಟದ್ದು... ಮೂವತ್ತೂರು ವರ್ಷ ಎಲ್ಲಾ



ತಗೊಂಡ. ಇನ್ನು ನೀ ಕೈಗೆ ತಗ...'

ಸುಶೀಲ ಅಂದಳು: 'ಮೂವತ್ತೂರು ವರ್ಷ ಮಾಡಿದ್ದು ಉಪಕಾರಕ್ಕೆ ಅಂದ್ಕೊಂಡಿದಿ ನೀನು. ನಾವೆಲ್ಲ ನೀನು ನಮ್ಮಲ್ಲಿರ್ಲಿ ಅಂತ ಹೇಳಿದ್ರೂ ಕೇಳದೆ ನಿನ್ನ ಕರಕೊಂಡು ಅಷ್ಟು ದೂರ ಹೋದ್ದು ನಿನ್ನ ಆಸ್ತಿಗೇ. ಇನ್ನು ನೀನು ಎಲ್ಲೂ ಹೋಗೂದು ಬ್ಯಾಡ, ನಮ್ಮೊಟ್ಟಿಗಿರು.'

'ತಿಂಗಳಿಗೊಮ್ಮೆ ತೋರ್ಸು ಗುಣ ಆಗ್ತದೆ ಅಂತ್ ಹೇಳಿದ್ರು ಬೆಂಗಳೂರು ಡಾಕ್ಟ್ರು. ಯಾಕಂತೆ ಅಂವ ಕರಕೊಂಡು ಹೋಗ್‌ಲೇ ಇಲ್ಲ! ಕಾಗದಪತ್ರ ನಮ್‌ಹತ್ರ ಅದೆ ತೋರುಸ್ಲಾ? ಅತ್ಗೆಗೆ ಇನ್ನೊಂದು ಮದವಿ ಮಾಡಿದ್ದು ಅವಳಮೇಲಿನ ಅನುಕಂಪಕ್ಕಲ್ಲ. ಆಸ್ತಿ ತನಗುಳೀಲಿ ಅಂತಾ ಪ್ಲಾನು. ಡ್ರೈವರ್ಸಿಗೆ ಎಷ್ಟೆಲ್ಲ ಗುದ್ದಾಡಿ ನಾಟಕ ಮಾಡಿ ಅವಳಪ್ಪಗೆ ಸಹಾಯ ಮಾಡಿದ್ದು ನಮಗೆ ಗೊತ್ತಿಲ್ಲ ಅಂದ್ಕಂಡಿದಾನೆ.'

'ನೋಡು, ನಮ್ ಮಕ್ಳಿಗೂ ಹೈಸ್ಕೂಲು ಕಾಲೇಜು ಕಲಿಸ್ಬೇಕು. ಮೊದ್ಲ ಹಾಂಗಲ್ಲ ಈಗ. ಎಲ್ಲಿಂದ ಬರ್ತದೆ ದುಡ್ಡು? ನಿಂಗಾದ್ರು ಇನ್ನು ಆಸ್ತಿ ಯಾವ ಲಾಭಕ್ಕೆ... ನೀನು ಇಷ್ಟಿಷ್ಟು ಅಂತ ನಮಗಷ್ಟು ಪಾಲು ಕೊಟ್ಟು ಪುಣ್ಯ ಕಟ್ಕೊ... ಇದು ನಾವ್ ಬೇಡ್ಕಳೂದು ಅಣ್ಣ ಅಂತ,